# ಆಹಾ ಸುದ್ದಿ!

★ ಸಸಿತೋಟ



ರಷ್ಯಾದಲ್ಲಿ ರೊಬಾಟ್ ಒಂದು ಪ್ರಯೋಗಾಲಯದಿಂದ ತಪ್ಪಿಸಿಕೊಂಡು ವಾಹನ ಸಂಚಾರಕ್ಕೆ ಧಕ್ಕೆ ಉಂಟು ಮಾಡಿತಂತೆ. ಪ್ರೋಮೊಬಾಟ್ ಹೆಸರಿನ ಈ ರೊಬಾಟ್ ಗ್ರಾಹಕರ ಪ್ರಶ್ನೆಗಳಿಗೆ ಉತ್ತರಿಸುವ ಹಾಗೂ ಮಾರ್ಗದರ್ಶನ ನೀಡುವ ತರಬೇತಿ ಪಡೆಯುತ್ತಿತ್ತು. ಪಾಪ, ರೊಬಾಟ್ ಕೂಡಾ ಸ್ವಾತಂತ್ರ್ಯ ಪಡೆಯಲು ಯತ್ನಿಸಿರಬಹುದು.

ಜರ್ಮನಿಯ ಹುಕ್ಕಾ ಬಾರ್‌ಗಳಲ್ಲಿ ಸೇದಲು ಚಾಕೊಲೇಟ್‌ಗೆ ಬಳಸುವ ಕೊಕೊವಾ ಪುಡಿಯನ್ನು ಇಟ್ಟಿದ್ದಾರಂತೆ. ಇದನ್ನು ಸೇದಿದವರು ತೇಲಾಡುವ ಅನುಭವದ ಜೊತೆಗೆ ಸ್ನಾಯುಗಳೆಲ್ಲ ಸಡಿಲವಾಗುತ್ತವೆ, ರಕ್ತ ಪರಿಚಲನೆ ಜಾಸ್ತಿಯಾಗುತ್ತದೆ ಎಂದು ತಾರೀಫು ಮಾಡುತ್ತಿದ್ದಾರಂತೆ. ಮಾದಕದ್ರವ್ಯದ ಲೋಕದಲ್ಲೇ ಹೆಚ್ಚೆಚ್ಚು ಸಂಶೋಧನೆಗಳಾಗುತ್ತಿವೆ ಯಾಕೆ ಎಂಬುದರ ಸಂಶೋಧನೆಯೂ ಆಗಬೇಕಾಗಿದೆ.

ಜಪಾನಿನಲ್ಲಿ ತಲೆ ಎತ್ತಲಿರುವ ಬೆತ್ತಲೆ ಉಪಾಹಾರಗೃಹದಲ್ಲಿ ಗ್ರಾಹಕರು ನಿಗದಿತ ತೂಕಕ್ಕಿಂತ ಜಾಸ್ತಿ ಇರಬಾರದಂತೆ, ಪ್ರವೇಶ ದ್ವಾರದಲ್ಲೇ ತೂಕದ ಯಂತ್ರವಿರಲಿದೆಯಂತೆ. ವಯಸ್ಸಾದವರಿಗೆ, ಹಚ್ಚೆ ಹಾಕಿಸಿಕೊಂಡವರಿಗೆ ಕೂಡಾ ಪ್ರವೇಶವಿಲ್ಲವಂತೆ. ಈ ಶೇಪ್ ಮತ್ತು ಸೈಜ್‌ಗಳು ತಿಂದುಂಡು ಹೊರ ಬಂದ ನಂತರ ಬದಲಾದರೆ ದುಡ್ಡು ಕೊಟ್ಟವನನ್ನೇ ಹೊಣೆಗಾರನನ್ನಾಗಿ ಮಾಡುವ ಜಾಣತನ ಅಡಗಿರಬಹುದು.





ನೇಪಾಳದ ಶಾಲೆಯೊಂದರಲ್ಲಿ 10ನೇ ತರಗತಿ ಓದುತ್ತಿರುವ ಈ ವಿದ್ಯಾರ್ಥಿಗೆ 68 ವರ್ಷ ವಯಸ್ಸು. ದುರ್ಗಾ ಕಾಮಿ ಎಂಬ ಈ ವಿದ್ಯಾರ್ಥಿ ಹೊರಗಿನಿಂದ ಪರೀಕ್ಷೆಗೆ ಕೂರದೆ ನಿತ್ಯ ಶಾಲೆಗೆ ಹೋಗುತ್ತಿರುವುದಕ್ಕೆ ಕಾರಣ ವೃದ್ಧಾಪ್ಯದ ಸಮಸ್ಯೆಗಳನ್ನು ಮರೆಯುವುದಕ್ಕಂತೆ. ಸಮಸ್ಯೆಗಳನ್ನು ಮರೆಯಲು ಬಾಟಲ್ ಹಿಡಿಯುವುದಕ್ಕಿಂತ ಸ್ಲೇಟ್ ಹಿಡಿಯುವುದು ಲೇಸು ಎಂದು ಕಾಮಿ ತೋರಿಸಿಕೊಟ್ಟಿದ್ದಾರೆ.




ತಮ್ಮ ಪಕ್ಷದ ಮುಖಂಡರ ಹುಟ್ಟುಹಬ್ಬ ಆಚರಿಸುವುದೇನೋ ಸರಿ. ಆದರೆ ಅಮೆರಿಕದ ಅಧ್ಯಕ್ಷೀಯ ಅಭ್ಯರ್ಥಿ ಡೋನಾಲ್ಡ್ ಟ್ರಂಪ್ ಹುಟ್ಟುಹಬ್ಬವನ್ನು ಇತ್ತೀಚೆಗೆ ಪಕ್ಷವೊಂದರ ಕಾರ್ಯಕರ್ತರು ದೆಹಲಿಯಲ್ಲಿ ಆಚರಿಸಿ ಕೃತಾರ್ಥರಾದರಂತೆ. ದೆಹಲಿಯಿಂದ ವಾಷಿಂಗ್ಟನ್ ಇನ್ನು ಕೂಗಳತೆಯ ದೂರ!

ಅಮೆರಿಕದ ಕಂಪೆನಿಯೊಂದು ಬೆಕ್ಕುಗಳಿಗೆಂದೇ ವಿಶೇಷ ವೈನ್ ತಯಾರಿಸಿದೆಯಂತೆ. ಬೀಟ್‌ರೂಟ್‌ನಿಂದ ತಯಾರಿಸಿದ ಈ ವೈನ್ ಕುಡಿದರೆ ರಾತ್ರಿಯಿಡೀ ಮಿಯಾಂವ್ ಎಂದು ಕೂಗುತ್ತ ಓಡಾಡುವ ಬೆಕ್ಕು ಆರಾಮವಾಗಿ ನಿದ್ರೆ ಮಾಡುತ್ತದಂತೆ. ಬೆಕ್ಕಿನ ಒಡೆಯನನ್ನು ನಿದ್ರೆ ಮಾಡಿಸಲು ಸೋತ ವೈನ್ ತಯಾರಕರು ಈ ನಿಟ್ಟಿನಲ್ಲಾದರೂ ಯಶಸ್ವಿಯಾಗಿದ್ದಾರೆ.